(ಇಂದು ದಿನಾಂಕ:**09/09/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**<u>ಪಾಟೀ ಸವಾಲು 1 ಮತ್ತು 4 ನೇ ಎದುರುದಾರ ಹಾಗೂ 2 ಮತ್ತು 3 ನೇ ಎದುರುದಾರರ ವಾರಸುದಾರರ ಪರ ಶ್ರೀ ಎಸ್.ಯು.ಜಿ. (ಯು.ಎಸ್.ಜಿ.) ವಕೀಲರಿಂದ:-</u>**

2. 1 ನೇ ಎದುರುದಾರರು ಕೇಳಿದ ಪರಿಹಾರದ ಬಗ್ಗೆ ನನಗೆ ಗೊತ್ತು. ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ಆಸ್ತಿ ಮೂಲತಃ ಬನ್ನಿಕೊಪ್ಪ ಮನೆತನಕ್ಕೆ ಸೇರಿದ್ದು ಎನ್ನುವುದು ನಿಜ. ಆಸ್ತಿಯನ್ನು ಬಿನ್ ಶೇತ್ಕಿಯನ್ನಾಗಿ ಯಾವಾಗ ಮಾಡಲಾಯಿತು ಎನ್ನುವುದು ಗೊತ್ತಿಲ್ಲ. ಅದು ನನ್ನ ಮನೆಯವರಿಗೆ ಗೊತ್ತು.

3. ನಮಗಿಂತ ಮುಂಚೆ ಶೇಷಗಿರಿ ರಾವ್ ಎನ್ನುವವರು ಚಹಾದ ಅಂಗಡಿ ನಡೆಸುತ್ತಿದ್ದರು ಎಂದರೆ ಅವರು ಬಿಟ್ಟು ಹೋಗಿದ್ದರು. ಶೇಷಗಿರಿ ರಾವ್ ನಂತರ ನಾವು ಆಸ್ತಿಯನ್ನು ಬಾಡಿಗೆ ನಾತೆಯಿಂದ ಪಡೆದೆವು ಎನ್ನುವುದು ನಿಜ. ಬಾಡಿಗೆಯನ್ನು ಪಿಗ್ಮಿ ರೂಪದಲ್ಲಿ ಕೊಡುತ್ತಿದ್ದೆವು ಎನ್ನುವುದು ನಿಜ. ಚಹಾದ ಅಂಗಡಿ ನಡೆಸಲು ಪರವಾನಿಗೆ ಬೇಕು ಎನ್ನುವುದು ನಿಜ. ಲೈಸೆನ್ಸನ್ನು ಕಾಲಕಾಲಕ್ಕೆ ನವೀಕರಿಸಬೇಕಾಗುತ್ತದೆ ಎನ್ನುವುದು ಗೊತ್ತಿಲ್ಲ. ಆಸ್ತಿಯಲ್ಲಿ ಕಟ್ಟಡ ಕಟ್ಟಲು ಪರವಾನಿಗೆ ಪಡೆಯಲಾಯಿತೋ ಇಲ್ಲವೋ ನನ್ನ ಗಂಡನಿಗೆ ಗೊತ್ತು.

4. ಕಟ್ಟಡ ಕಟ್ಟಲು ಸಾಮಗ್ರಿ ಎಲ್ಲಿ ಮತ್ತು ಯಾವಾಗ ಖರೀದಿಸಲಾಯಿತು ಗೊತ್ತಿಲ್ಲ. ನಾವು ಹೋಟೆಲ್ ಇಟ್ಟುಕೊಂಡ ಬಗ್ಗೆ ಫೋಟೋ ಹಾಜರುಮಾಡಿದ್ದೇನೆ. ಭೂಸ್ವಾಧೀನ ಪ್ರಕ್ರಿಯೆ ವಿವರವು ಸಹ ನನ್ನ ಗಂಡನಿಗೆ ಗೊತ್ತು. ಅವಾರ್ಡನಲ್ಲಿ 1 ರಿಂದ 4 ನೇ ಎದುರುದಾರರ ಹೆಸರು ನಮೂದಿಸಲಾಗಿದೆ ಎನ್ನುವುದು ನಿಜ. ಆಸ್ತಿಯಲ್ಲಿ ಕಟ್ಟಡ ಇದೆ ಎಂದು ತೋರಿಸಲು ನಮ್ಮ ಪರವಾಗಿ ಭೂಸ್ವಾಧೀನಾಧಿಕಾರಿ ಮುಂದೆ ಫೋಟೋ ಹಾಜರುಮಾಡಲಾಗಿದೆಯೋ ಇಲ್ಲವೋ ನನ್ನ ಗಂಡನಿಗೆ ಗೊತ್ತು.

5. ಭೂಸ್ವಾಧೀನ ಪ್ರಕ್ರಿಯೆ ಕಾಲಕ್ಕೆ ನಮ್ಮ ಹೋಟೆಲ್ ಲೈಸೆನ್ಸ ಇತ್ತು. ಭೂಸ್ವಾಧೀನ ಪ್ರಕ್ರಿಯೆ ಯಿಂದ ನಮಗೆ ಎಷ್ಟು ಹಾನಿಯಾಯಿತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ.

6. ಚಹಾದ ಅಂಗಡಿ ಮುಚ್ಚಲಾಗಿದೆ ಎಂದು ನಾನು ಶಿಗ್ಗಾಂವ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದೇನೆ ಎನ್ನುವುದು ಸುಳ್ಳು. ನಾನು ಶಿಗ್ಗಾಂವ ನ್ಯಾಯಾಲಯದಲ್ಲಿ ಸಾಕ್ಷಿ ನೀಡಿದ್ದೇನೆ. ದಾವಾ ಆಸ್ತಿಯಲ್ಲಿ ಕಟ್ಟಡ ಮಾಡಲು ನನ್ನಲ್ಲಿ ಬಂಡವಾಳ ಇಲ್ಲ ಎನ್ನುವುದು ಸುಳ್ಳು. ಈಗ ನಾನು ಶಿಗ್ಗಾಂವನ ವಿದ್ಯಾನಗರದಲ್ಲಿ ವಾಸವಾಗಿದ್ದೇನೆ ಹಾಗೂ ಎಪಿಎಂಸಿ ಹತ್ತಿರ ಚಹಾದ ಅಂಗಡಿ ಇಟ್ಟುಕೊಂಡಿದ್ದೇನೆ ಎನ್ನುವುದು ನಿಜ.

7. 1 ರಿಂದ 4 ನೇ ಎದುರುದಾರರಿಗೆ ಬರಬೇಕಾದ ಹಣವನ್ನು ನಾನು ಪಡೆಯಲು ಸುಳ್ಳು ತಕರಾರು ಸಲ್ಲಿಸಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ದಾವಾಸ್ತಿಯಲ್ಲಿ ನನಗೆ ಹಕ್ಕಿಲ್ಲ ಎನ್ನುವುದು ಸುಳ್ಳು.

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ–</u>**

ಇಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.